# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಪ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ21.10.2021.

| | | |
|---|---|---|
| ಸಾಕ್ಷಿದಾರರ ಹೆಸರು | - | ಚನ್ನಮ್ಮ, |
| ತಂದೆಯ/ಗಂಡನ ಹೆಸರು | - | ರಾಜು , |
| ವಯಸ್ಸು | - | 58 ವರ್ಷ, |
| ಉದ್ಯೋಗ | - | ಹೌಸ್ ಕೀಪಿಂಗ್ , |
| ವಾಸ | - | ಸಂಪಂಗಿರಾಮನಗರ, ಆನೇಕಲ್. |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>

ಚಾಸಾ-2 ನನ್ನ ಯಜಮಾನರು. ನಾವು ಪರಿಶಿಷ್ಟ ಜಾತಿಯ ಬೋವಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತು. ಆರೋಪಿ ತಿಗಳರ ಜಾತಿಗೆ ಸೇರಿದವರು. ನನ್ನ ಯಜಮಾನರಿಗೆ ಬನ್ನೇರುಘಟ್ಟ ರಸ್ತೆಯ ಸಂಪಂಗಿರಾಮನಗರದಲ್ಲಿ ಒಂದು ಮನೆ ಇದೆ. ಸದರಿ ಮನೆಯನ್ನು ನನ್ನ ಯಜಮಾನರು ನನ್ನ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಸದರಿ ಆಸ್ತಿ ನನ್ನ ಯಜಮಾನರಿಗೆ ಸರ್ಕಾರದಿಂದ ಮಂಜೂರಾಗಿತ್ತು. ಸದರಿ ಆಸ್ತಿಯಲ್ಲಿ ಶೀಟಿನ ಶೆಡ್ ಹಾಗೂ ಮೌಲ್ಡಿನ ಮನೆ ಮಾಡಿಕೊಂಡು ವಾಸವಾಗಿದ್ದೇವೆ. ಎಷ್ಟು ಅಂತಸ್ತಿನ ಮನೆ ಇದೆ ನನಗೆ ಗೊತ್ತಿಲ್ಲ.

2. ಆಗಾಗ್ಗೆ ಆರೋಪಿ ನಮ್ಮ ಯಜಮಾನರ ಬಳಿ ಮಾತನಾಡುತ್ತಿದ್ದರು. ದುಡ್ಡು ಬೇಕೆಂದು ನನ್ನ ಯಜಮಾನರನ್ನು ಕೇಳುತ್ತಿದ್ದರು. ಆರೋಪಿಯು ತನ್ನ ಸ್ನೇಹಿತ ವೆಂಕಟೇಶನ ಹತ್ತಿರ ಸುಮಾರು ಹತ್ತು ಲಕ್ಷವನ್ನು ಬಂಡೆ ಕೆಲಸವನ್ನು ಮಾಡಲು ಸಾಲ

ರೂಪದಲ್ಲಿ ಪಡೆದುಕೊಂಡಿದ್ದನು. ಸುಮಾರು 5-6 ವರ್ಷ ಬಂಡೆಯಲ್ಲಿ ಕೆಲಸ ಮಾಡಿದ್ದನು ನಂತರ ಸದರಿ ಬಂಡೆಯಲ್ಲಿ ಕೆಲಸ ನಿಂತು ಹೋಗಿತ್ತು. ಆರೋಪಿಯು ವೆಂಕಟೇಶನ ಹತ್ತಿರ ಹತ್ತು ಲಕ್ಷವನ್ನು ತನ್ನ ಯಜಮಾನರು ಹಾಗೂ ತಾನು ಕೂಡಿಕೊಂಡು ಬಂಡೆ ಕೆಲಸ ಮಾಡಲು ಹಣ ಪಡೆದು ತಾನೇ ಇಟ್ಟುಕೊಂಡಿದ್ದನು. ಆರೋಪಿಯು 5-6 ವರ್ಷದ ನಂತರ ಬಿಟ್ಟು ಹೋಗಿದ್ದನು. ನನ್ನ ಯಜಮಾನರೇ 2-3 ವರ್ಷ ತಾನೇ ಬಡ್ಡಿಯನ್ನು ವೆಂಕಟೇಶನಿಗೆ ನೀಡುತ್ತಿದ್ದನು.

3. ಸುಮಾರು 5 ವರ್ಷದ ಹಿಂದೆ ನನ್ನ ಮಗನಿಗೆ ಅಪಘಾತವಾಗಿತ್ತು. ಪುನಃ ಆರೋಪಿ ಬಂದು ನನ್ನ ಯಜಮಾನರ ಬಳಿ ಹಣವನ್ನು ಕೇಳಿದ್ದನು ಮತ್ತು ಹಣ ನೀಡದಿದ್ದರೆ ನಾವು ವಾಸವಿದ್ದ ಮನೆ ತನ್ನದಾಗುತ್ತದೆ ಎಂದು ಹೇಳಿ ಸುಮಾರು ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿಸಿದ್ದನು. ಸದರಿ ಗಲಾಟೆಯು 11 ನೇ ತಾರೀಖು 6 ನೇ ತಿಂಗಳಿನಲ್ಲಿ 4 ಗಂಟೆ ಸಮಯದಲ್ಲಿ ಗಲಾಟೆ ನಡೆದಿತ್ತು. ಆರೋಪಿಯು ತನ್ನ ಪತ್ನಿ ಕವಿತಾ, ವೆಂಕಟೇಶ ಹಾಗೂ ಮತ್ತು ಅವನ ಊರಿನವರನ್ನು ಕರೆದುಕೊಂಡು ಬಂದು ಗಲಾಟೆ ಮಾಡಿದ್ದನು.

4. ಗಲಾಟೆಯಲ್ಲಿ ಆರೋಪಿ ಹಾಗೂ ಇತರರು ನಮ್ಮನ್ನು ಮನೆಯಿಂದ ಹೊರಗೆ ಹಾಕಿ ಮನೆಯಲ್ಲಿರುವ ಸಾಮಾನುಗಳನ್ನು ಮನೆಯ ಹೊರಗೆ ಹಾಕಿದ್ದನು. ನಾವು ದೇವಸ್ಥಾನದಲ್ಲಿ ರಾತ್ರಿ ಕಳೆದಿದ್ದೆವು. ನಂತರ ಡಿವೈಎಸ್ಪಿ ಕಛೇರಿಗೆ ಹೋಗಿ ದೂರು ನೀಡಿದ್ದೆವು. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತು ಮಾಡಲಾಯಿತು.

5. ದೂರು ನೀಡಿದ ನಂತರ ಪೋಲಿಸರು ನಮ್ಮ ಮನೆಗೆ ಬಂದು ಪರಿಶೀಲಿಸಿದ್ದರು. ನಮ್ಮ ಮನೆಯ ಬಳಿ ದಾಖಲಾತಿಗೆ ಸಹಿ ಮಾಡಿದ್ದೇನೋ ಇಲ್ಲವೊ ನೆನಪಿಲ್ಲ. ಸಾಕ್ಷಿ

ಮಹಜರ್ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತು ಮಾಡಲಾಯಿತು.

6. ಆರೋಪಿ ನಮಗೆ ಜಾತಿ ನಿಂದನೆ ಮಾಡಿ ನನ್ನ ಸೀರೆ ಹಿಡಿದು ಎಳೆದಾಡಿದ್ದನು. ಘಟನೆ ಸಮಯದಲ್ಲಿ ಊರಿನ ಸಾಕಷ್ಟು ಜನ ಸೇರಿದ್ದರು. ಆರೋಪಿತರು ಹೆದರಿಸಿದ್ದರಿಂದ ಯಾರೂ ನಮ್ಮ ಸಹಾಯಕ್ಕೆ ಬಂದಿರಲಿಲ್ಲ. ಪೋಲಿಸರು ಗಲಾಟೆ ಬಗ್ಗೆ ನನ್ನನ್ನು ವಿಚಾರಿಸಿದ್ದರು.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ದೂರು, ಮಹಜರ್, ಕಲಂ161ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

7. ಕಲ್ಲು ಕೆಲಸದಲ್ಲಿ ಲಾಸ್ ಆಗಿದ್ದರಿಂದ ನಮಗೆ ಹಣ ನೀಡಲು ಆಗಿರಲಿಲ್ಲ ಎಂದರೆ ಸರಿ. ಸರ್ಕಾರದಿಂದ 32*60 ಅಡಿ ಅಳತೆಯ ಮಂಜುರಾಗಿದ್ದ ಆಸ್ತಿಯಲ್ಲಿ ಕೆಳ ಮತ್ತು ಮೇಲೆ ಅಂತಸ್ತಿನ ಎರಡು ಮನೆಗಳನ್ನು ಕಟ್ಟಿಸಿಕೊಂಡಿದ್ದೆವು ಎಂದರೆ ಸರಿ. ನಾನು, ನನ್ನ ಯಜಮಾನರು, ನನ್ನ ಮಗ ಹಾಗೂ ಸೊಸೆ ವಾಸವಾಗಿದ್ದೆವು ಎಂದರೆ ಸರಿ. ಆರೋಪಿ ನಮ್ಮ ಮನೆಯನ್ನು ಖಾಲಿ ಮಾಡಿ ಎಂದು ತೊಂದರೆ ಕೊಡುತ್ತಿದ್ದರು ಎಂದರೆ ಸರಿ. ದಿಃ19.05.2015ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನಾನು, ನನ್ನ ಯಜಮಾನರು ಮನೆಯಲ್ಲಿದ್ದಾಗ ಆರೋಪಿ ನಮ್ಮ ಮನೆಯ ಬಳಿ ಬಂದು ಗಲಾಟೆ ಮಾಡಿದ್ದರು ಎಂದರೆ ಸರಿ. ಘಟನೆಯಲ್ಲಿ ಆರೋಪಿ ನಮಗೆ ಏ ವಡ್ಡ ನನ್ನ ಮಕ್ಕಳಾ, ವಡ್ಡನಾ ಪೂಕ ಎಂದು ನಮ್ಮನ್ನು ಜಾತಿ ಹಿಡಿದು ಬೈದು ಮನೆ ಖಾಲಿ ಮಾಡದೇ ಹೋದರೆ ನಿಮ್ಮನ್ನು ನಿಮ್ಮ ವಸ್ತುಗಳನ್ನು ಹೊರಗೆ ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದನು ಎಂದರೆ ಸರಿ. ನಮ್ಮ ಸಂಬಂಧಿಕ ಶಿವು ಚಾಸಾ-7ರವರು ಹಣ ಸೆಟಲ್ ಮಾಡುತ್ತೇನೆ ಎಂದು ಹೇಳಿದ್ದರೂ ಆರೋಪಿ ಮನೆ ಖಾಲಿ ಮಾಡಿ ಎಂದು

ಪೀಡಿಸುತ್ತಿದ್ದನು ಎಂದರೆ ಸರಿ. ಆರೋಪಿ ನನ್ನ ಯಜಮಾನರಿಗೆ ಕೈಯಿಂದ ಹೊಡಿಬಡಿ ಮಾಡಿದ್ದರು ಎಂದರೆ ಸರಿ. ಗಲಾಟೆಯನ್ನು ಚಾಸಾ-3 ರಿಂದ 6 ರವರು ನೋಡಿದ್ದರು ಎಂದರೆ ಸರಿ. ದೂರು ನೀಡುವ ಸಮಯದಲ್ಲಿ ಹಾಗೂ ಹೆಚ್ಚುವರಿ ಹೇಳಿಕೆ ನೀಡುವ ಸಮಯದಲ್ಲಿ ಈ ಎಲ್ಲಾ ವಿಚಾರಗಳನ್ನು ಪೋಲಿಸರಿಗೆ ಹೇಳಿದ್ದೇನೆ ಎಂದರೆ ಸರಿ. ಆರೋಪಿ ಗಲಾಟೆ ಮಾಡಿ ಜಾತಿ ದೌರ್ಜನ್ಯ ಮಾಡಿ ಪ್ರಾಣ ಬೆದರಿಕೆ ಹಾಕಿದ್ದ ಬಗ್ಗೆ ನಿಪಿ-1 ರಂತೆ ದೂರು ನೀಡಿದ್ದೆ ಹಾಗೂ ಗಲಾಟೆ ಬಗ್ಗೆ ಮುಂದುವರಿದ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

8. ದೂರು ನೀಡಿದ ನಂತರ ಪೋಲಿಸರು ನಮ್ಮ ಮನೆಗೆ ಬಂದು ಮಹಜರ್ ಮಾಡಿದ್ದರು ನಾನು ಗಲಾಟೆ ನಡೆದ ಸ್ಥಳ ಎಂದು ತೋರಿಸಿದ್ದರ ಮೇರೆಗೆ ಪೋಲಿಸರು ದಿಃ 12.06.2015 ರಂದು ಬೆಳಗ್ಗೆ 09.30 ರಿಂದ 10.30 ರ ಸಮಯದಲ್ಲಿ ನನ್ನ ಮನೆಯ ಬಳಿ ನಿಪಿ-2 ರಂತೆ ಮಹಜರ್ ಮಾಡಿದ್ದರು ಎಂದರೆ ಸರಿ. ಮಹಜರ್ ಗೆ ನಾನು ಹಾಗೂ ಚಾಸಾ-13 ಮತ್ತು 14 ರವರು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿದ್ದೆವು ಎಂದರೆ ಸರಿ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದಃ ಶ್ರೀ ಕೆಸಿಟಿ ವಕೀಲರಿಂದಃ**

**9.** ಆರೋಪಿ ಪರ ವಕೀಲರು ಕಲಂ 231(2) ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು